(4) ಮಂಡ್ಯ ಸರ್ಕಾರಿ ಮಹಿಳಾ ಕಾಲೇಜಿಗೆ ಕಟ್ಟಡ ವಿಸ್ತರಿಸುವುದು.

ಶ್ರೀ ಎಂ.ಎಸ್. ಆತ್ಮಾನಂದ : ಮಂಡ್ಯ ನಗರದಲ್ಲಿ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಸುಮಾರು ಎರಡು ಸಾವಿರ ವಿದ್ಯಾರ್ಥಿನಿಯರು ವ್ಯಾಸಾಂಗ ಮಾಡುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಇದೊಂದೆ ಮಹಿಳೆಯರಿಗೊಸ್ಕರ ಇರುವ ಕಾಲೇಜಾಗಿದೆ. ಉತ್ತಮ ಫಲಿತಾಂಶವು ಸಹ ಈ ಕಾಲೇಜಿನಲ್ಲಿ ಬರುತ್ತಾ ಇದೆ. ಪ್ರಸಕ್ತ ಇರುವ ಕೊಠಡಿಗಳ ಸಂಖ್ಯೆಯು ಸಾಕಾಗದೆ, ವಿದ್ಯಾರ್ಥಿನಿಯರಿಗೆ ತುಂಬಾ ತೊಂದರೆಯಾಗುತ್ತಾ ಇದೆ. ಇದು ಅಲ್ಲದೆ ಪಕ್ಕದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಕೊಠಡಿಗಳಲ್ಲೂ ಸಹ ತರಗತಿಗಳನ್ನು ನಡೆಸುತ್ತಿದ್ದಾರೆ. ಈ ಸ್ಥಳಾಭಾವದ ಪರಿಸ್ಥಿತಿಯಿಂದ ಪಾಠಪ್ರವಚನಗಳಿಗೆ ತುಂಬಾ ಸಮಸ್ಯೆಯಾಗಿದೆ. ಪೋಷಕರು ಈ ಬಗೆಗೆ ತುಂಬಾ ಚಿಂತಿತರಾಗಿದ್ದಾರೆ. ಈ ಕಾಲೇಜು ಪ್ರಾರಂಭವಾಗಿ ಸುಮಾರು ಹದಿನೈದು ವರ್ಷಗಳು ಕಳೆದರೂ ಸಹ ಸೂಕ್ತ ರೀತಿಯಲ್ಲಿ ಅಭಿವೃದ್ಧಿಯಾಗಿಲ್ಲ. ಆದುದರಿಂದ ಮಂಡ್ಯದಲ್ಲಿರುವ ಮಹಿಳಾ ಕಾಲೇಜಿನ ಕಟ್ಟಡವನ್ನು ಶ್ರೀಘ್ರದಲ್ಲಿಯೇ ವಿಸ್ತರಣೆ ಮಾಡಲು ಜಾರೂರು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನೆ ಒತ್ತಾಯಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಶಿಕ್ಷಣ ಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಂಡ್ಯ ನಗರ ಮಹಿಳಾ ಸರ್ಕಾರಿ ಕಾಲೇಜು, ಈಗ 12 ಕೊಠಡಿಗಳಿರುವ ಸ್ವಂತ ಕಟ್ಟಡದಲ್ಲಿ ನಡೆಯುತ್ತಿದ್ದು, ಪ್ರತಿ ವರ್ಷ ವಿದ್ಯಾರ್ಥಿನಿಯರ ಸಂಖ್ಯೆ ಅಧಿಕಗೊಳ್ಳುತ್ತಿರುವುದರಿಂದ ಸ್ಥಳಾಭಾವ ಉಂಟಾಗಿ ತೊಂದರೆಯುಂಟಾಗುತ್ತಿದೆ. 1989ನೇ ಸಾಲಿನಲ್ಲಿ ಈ ಮಹಿಳಾ ಕಾಲೇಜಿನಲ್ಲಿ ಒಟ್ಟು 1199 ವಿದ್ಯಾರ್ಥಿನಿಯರು ವಿವಿಧ ತರಗತಿಗಳಲ್ಲಿ ವ್ಯಾಸಾಂಗ ಮಾಡುತ್ತಿದ್ದು, ಈ ಸಾಲಿನಲ್ಲಿ ಒಟ್ಟು 1,523 ವಿದ್ಯಾರ್ಥಿನಿಯರಿರುತ್ತಾರೆ. ಈಗಿನ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಇನ್ನೂ ಹೆಚ್ಚುವರಿಯಾಗಿ ಹತ್ತು ಕೊಠಡಿಗಳಾದರೂ ಬೇಕಾಗಿರುತ್ತದೆ.

ಹಾಲಿ ನಡೆಸಲಾಗುತ್ತಿರುವ ಕಟ್ಟಡದ ಮೇಲೆ ತಾಂತ್ರಿಕ ದೋಷದ ಕಾರಣ ಮೊದಲನೇ ಮಹಡಿ ನಿರ್ಮಿಸಲು ಸಾಧ್ಯವಾಗಲಾರದೆಂದು ಮುಖ್ಯ ಅಭಿಯಂತರರು ಅಭಿಪ್ರಾಯಪಟ್ಟಿರುವುದರಿಂದ, ಈಗಿರುವ ಕಟ್ಟಡದ ಪಕ್ಕದಲ್ಲಿ ಅಧಿಕ ಕೊಠಡಿಗಳನ್ನು ನಿರ್ಮಿಸಲು, ಶಿಲ್ಪ ವಿನ್ಯಾಸವನ್ನು ರೂಪಿಸಲು ಮುಖ್ಯ ವಾಸ್ತುಶಿಲ್ಪಿಯವರನ್ನು ಕೋರಲಾಗಿದೆ. ಕಟ್ಟಡದ ಅಂದಾಜು ಮತ್ತು ನಕ್ಷೆಯನ್ನು ಮುಖ್ಯ ವಾಸ್ತುಶಿಲ್ಪಿಯವರಿಂದ ಪಡೆದ ನಂತರ ಕಟ್ಟಡವನ್ನು ಕಟ್ಟಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

(5) ಮಾಜಿ ಗೇಣಿದಾರರಿಂದ ಲ್ಯಾಂಡ್ ಬ್ಯಾಂಕ್‌ನವರು ಸಾಲ ವಸೂಲಾತಿ ಮಾಡುತ್ತಿರುವುದು.

ಶ್ರೀ ಕೆ. ಗಂಗಾಧರ ಗೌಡ : ರಾಜ್ಯದ ಮಾಜಿ ಗೇಣಿದಾರರು ಸರ್ಕಾರಕ್ಕೆ ಕಟ್ಟಬೇಕಾದ ಬಾಕಿ ಹಣವನ್ನು ಸರ್ಕಾರ ವಜಾ ಮಾಡಿದೆ. ಆದರೆ ಲ್ಯಾಂಡ್ ಡೆವಲೆಪ್‌ಮೆಂಟ್ ಬ್ಯಾಂಕ್‌ನವರು ತಾವು ಗೇಣಿದಾರರಿಗೆ ಕೊಟ್ಟ ಸಾಲವನ್ನು ವಸೂಲಿ ಮಾಡಲು ನೋಟೀಸ್ ಜಾರಿ ಮಾಡುತ್ತಿದ್ದು ವಸೂಲಿಗೆ ಹೊರಟಿದ್ದಾರೆ. ಇದ್ದರಿಂದ ಗೇಣಿದಾರರಿಗೆ ಕೊಟ್ಟ ಪರಿಹಾರ ಅವರಿಗೆ ಸಿಕ್ಕದಂತಾಗುವುದು. ನನ್ನ ಕ್ಷೇತ್ರವಾದ ಬೆಳ್ತಂಗಡಿಯ ಗೇಣಿದಾರರು ಸಂಶಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ತಾವು ತೆಗೆದುಕೊಂಡ ಕ್ರಮವನ್ನು ತಾಲ್ಲೂಕಿನ ಮಟ್ಟದವರೆಗೆ ಮುಟ್ಟಿಸಿ ಗೇಣಿದಾರ ಕುಟುಂಬಗಳು ಕಟ್ಟಲು ಉಳಿದಿರುವ ಹಣದ ಕಂತುಗಳನ್ನು ಮಾಪಿ ಮಾಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು) : ಭೂ ಸುಧಾರಣಾ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಸದಸ್ಯರು